# ಭಗವದ್ಗೀತೆ – ವಿದ್ಯಾರ್ಥಿಗಳ ಅಮೃತ ಸಂಜೀವಿನಿ

**ಸ್ವಾಮಿ ಶಾಂತಿವ್ರತಾನಂದ**

ಭಗವದ್ಗೀತೆಯು ಸಮಾಜದ ಎಲ್ಲ ವರ್ಗಗಳ, ಎಲ್ಲ ಹಂತಗಳ ಹಾಗೂ ಎಲ್ಲ ವಯೋಮಾನದ ವ್ಯಕ್ತಿಗಳಿಗೂ ಸೂಕ್ತವಾದ ಮಾರ್ಗದರ್ಶನ ನೀಡಿ ಮುನ್ನಡೆಸುವ ವಿಶಿಷ್ಟ ಗ್ರಂಥ. ಇಂಥ ವ್ಯಕ್ತಿತ್ವ ನಿರ್ಮಾಣಕಾರಿ ಗ್ರಂಥ ಇನ್ನೊಂದಿಲ್ಲ ಎಂದರೆ ತಪ್ಪಾಗಲಾರದು. ವಿಶೇಷವಾಗಿ ವಿದ್ಯಾರ್ಥಿಗಳಿಗೆ ಈ ಗ್ರಂಥದ ಉಪಯುಕ್ತತೆಯನ್ನು ಇಲ್ಲಿ ವಿವರಿಸಿರುವ ಲೇಖಕರು ಉತ್ತಮ ವಾಗ್ಮಿಗಳು ಮತ್ತು ಲೇಖಕರು. ಪ್ರಸ್ತುತ ಅವರು ಐರ್ಲೆಂಡಿನ ರಾಮಕೃಷ್ಣ ವೇದಾಂತ ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು 'ವಿವೇಕಪ್ರಭ' ದಲ್ಲಿ ಅನೇಕ ಸ್ಫೂರ್ತಿದಾಯಕ ಲೇಖನಗಳನ್ನು ಬರೆದಿದ್ದಾರೆ.

ಹೆನ್ರಿ ಡೇವಿಡ್ ಥೋರೋ ಅವರು, ''**ನಾನು ಪ್ರತಿನಿತ್ಯ ಪರಮಾದ್ಭುತವಾಗಿರುವ ಹಾಗೂ ವಿಶ್ವಾತ್ಮ ತತ್ತ್ವವನ್ನು ಹೊಂದಿರುವ ಭಗವದ್ಗೀತೆಯಲ್ಲಿ ಮೀಯುತ್ತೇನೆ. ಗೀತೆಗೆ ಈಗಿನ ಆಧುನಿಕ ಪ್ರಪಂಚದ ನೂತನ ಆವಿಷ್ಕಾರಗಳು ಮತ್ತು ಸಾಹಿತ್ಯವನ್ನು ಹೋಲಿಸಿ ನೋಡಿದಾಗ ಅವು ನನಗೆ ಅಲ್ಪ ಮತ್ತು ಬಾಲಿಶ ಎಂದು ಕಾಣಿಸುತ್ತದೆ**'' ಎನ್ನುತ್ತಾರೆ.

ಭಗವದ್ಗೀತೆಯು ಇಡೀ ಮಾನವ ಜನಾಂಗಕ್ಕೆ, ಎಲ್ಲ ಸ್ತರದವರಿಗೂ ಅದೊಂದು ಅದ್ಭುತವಾದ ಕೈಪಿಡಿಯೇ ಸರಿ. ಅಲ್ಲಿ ಹೇಳಿರುವ ಯಾವುದಾದರೂ ಒಂದು ವಿಚಾರವನ್ನು ನಾವು ಅರ್ಥ ಮಾಡಿಕೊಂಡು, ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ಯಶಸ್ಸನ್ನು ಕಾಣುವುದರಲ್ಲಿ ಯಾವುದೇ ಸಂಶಯವಿಲ್ಲ. ವಿದ್ಯಾರ್ಥಿಗಳು ಕೂಡ ಗೀತೆಯನ್ನು ಅಧ್ಯಯನ ಮಾಡಿ, ಇಲ್ಲಿ ಹೇಳಿರುವ ಪರಮಾದ್ಭುತವಾದ ವಿಚಾರಗಳನ್ನು ತಿಳಿದು, ಜೀವನದಲ್ಲಿ ಅವುಗಳನ್ನು ಅನುಷ್ಠಾನ ಮಾಡಿಕೊಂಡರೆ ಅವರು ಶ್ರೇಷ್ಠ ಸಾಧಕರು ಆಗುತ್ತಾರೆ ಎಂಬುದು ಸರ್ವವಿದಿತ.



### ದೌರ್ಬಲ್ಯವನ್ನು ಬಿಡು

**ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥**

*(ಗೀತೆ ೨.೩)*

'ಹೇ ಅರ್ಜುನ, ಹೇಡಿಯಾಗಬೇಡ, ಇದು ನಿನಗೆ ಯೋಗ್ಯವಲ್ಲ. ತುಚ್ಛವಾದ ಹೃದಯ ದೌರ್ಬಲ್ಯಗಳನ್ನು ತ್ಯಜಿಸು, ಎದ್ದೇಳು.'

ಸ್ವಾಮಿ ವಿವೇಕಾನಂದರ ಪ್ರಕಾರ ಇದರ ಹಿಂದಿನ ಹಾಗೂ ಈ ಶ್ಲೋಕ ಗೀತೆಯ ಸಾರ. ಅವೆರಡನ್ನು ನಾವು ಸರಿಯಾಗಿ ತಿಳಿದರೆ, ಗೀತೆಯ ಸಾರವನ್ನು ಅರಿತಂತೆ.

ಮುಸ್ತಾಫ ಪಿ. ಸಿ. ಎಂಬ ಕೇರಳದ ಹುಡುಗ. ಅವನ ತಂದೆ ಕೂಲಿ ಕೆಲಸ ಮಾಡುತಿದ್ದರು. ಅವನನ್ನು ಕಷ್ಟಪಟ್ಟು ಓದಿಸುತ್ತಿದ್ದರು. ಪ್ರತಿಯೊಬ್ಬ ತಂದೆ ಆಲೋಚಿಸಿದಂತೆ, ಮುಸ್ತಾಫನು ಚೆನ್ನಾಗಿ ಓದಿ ಮುಂದೆ ದೊಡ್ಡವನಾಗುತ್ತಾನೆ ಎಂದು ಅವನ ತಂದೆ ಆಲೋಚಿಸಿದ್ದ. ಆದರೆ ಮುಸ್ತಾಫನು ಸೋಮಾರಿತನದಿಂದ ಚೆನ್ನಾಗಿ ಓದಲಿಲ್ಲ. ಟಿ.ವಿ. ವೀಕ್ಷಣೆ, ಸ್ನೇಹಿತರ ಜೊತೆ ಬೀದಿ ಸುತ್ತುವುದು, ಹೀಗೆ ಅವನು ಕಾಲಹರಣ ಮಾಡುತ್ತಿದ್ದ. ಪ್ರತಿಫಲವಾಗಿ ಒಂಬತ್ತನೇ ತರಗತಿಯಲ್ಲಿ ಅನುತ್ತೀರ್ಣನಾದ. ತಂದೆಗೆ ಇದರಿಂದ ಬಹಳ ನೋವಾಯಿತು, ಕೋಪ ಬಂದಿತು. 'ನಾನು ಎಷ್ಟು ಕಷ್ಟಪಟ್ಟು ನಿನ್ನನ್ನು ಓದಿಸುತ್ತಿದ್ದೇನೆ. ಆದರೆ ನೀನು ಮಾತ್ರ ನನ್ನ ಶ್ರಮ ಹಾಗೂ ನಿನ್ನ ಸಮಯದ ವ್ಯರ್ಥ ಮಾಡಿದೆ' ಎಂದು ಮಗನಿಗೆ ಚೆನ್ನಾಗಿ ಬೈದರು. 'ನಾಳೆಯಿಂದ ನನ್ನ ಜೊತೆ ಕೂಲಿ ಕೆಲಸಕ್ಕೆ ಬಾ' ಎಂದು ಹೇಳಿದರು. ಆಗ ಮುಸ್ತಾಫನಿಗ ತನ್ನ ತಪ್ಪಿನ ಅರಿವಾಯಿತು. ತಂದೆಯವರಲ್ಲಿ ಕ್ಷಮೆ ಯಾಚಿಸಿದ. 'ಇನ್ನು ಮುಂದೆ ತಾನು ಚೆನ್ನಾಗಿ ಓದುತ್ತೇನೆ' ಎಂದು ಹೇಳಿದ. ಅನೇಕ ಬಾರಿ ಬುದ್ಧಿವಾದ ಹೇಳಿದ್ದರೂ ಮುಸ್ತಾಫನು ತಂದೆಯ ಮಾತು ಕೇಳದೇ ಇದ್ದರಿಂದ ಈ ಬಾರಿ ಮುಸ್ತಾಫನ ಮಾತಿಗೆ ಅವನ ತಂದೆ ಬೆಲೆ ಕೊಡಲಿಲ್ಲ. ಮಾರನೆ ದಿವಸದಿಂದ 'ಕೂಲಿಗೆ ಬರಲೇಬೇಕು' ಎಂದು ಮುಸ್ತಾಫನ ತಂದೆ ಕಠಿಣವಾಗಿ ಹೇಳಿ ಕೆಲಸಕ್ಕೆ ಹೋದರು. ಮುಸ್ತಾಫನು ಬಹಳ ಕಾಲ ಆಲೋಚಿಸಿ ತನ್ನ ಉಪಾಧ್ಯಾಯರ ನೆರವನ್ನು ಪಡೆದನು. ಅವರ ಬಳಿ ಅಂದು ನಡೆದ ಘಟನೆಯನ್ನು ತಿಳಿಸಿ, ತನಗೆ ಓದಲು ನೆರವಾಗಬೇಕೆಂದು ಪ್ರಾರ್ಥಿಸಿದನು. ಪಶ್ಚಾತ್ತಾಪದಿಂದ ಮುಸ್ತಾಫನಲ್ಲಿ ಬದಲಾಗುವ ಲಕ್ಷಣಗಳು ಅವನ ಉಪಾಧ್ಯಾಯರಿಗೆ ಕಂಡಿತು. ಆದ್ದರಿಂದ ಅವರು ಸಂಜೆ ಮುಸ್ತಾಫನ ಮನೆಗೆ ಹೋಗಿ ತಂದೆಯ ಬಳಿ ಮಾತನಾಡಿದರು. ಆದರೆ ಮುಸ್ತಾಫನ ತಂದೆಗೆ ಮಗನ

ಮೇಲೆ ಯಾವುದೇ ನಂಬಿಕೆಯಿರಲಿಲ್ಲ. ಕೊನೆಗೆ ಉಪಾಧ್ಯಾಯರು,'ನಾನು ನಿಮ್ಮ ಮಗನ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತೇನೆ. ಅವನಿಗೆ ಒಂದು ಕೊನೆಯ ಅವಕಾಶವನ್ನು ಕೊಡಿ. ಈ ಒಂದು ವರ್ಷದಲ್ಲಿ ಅವನಲ್ಲಿ ಯಾವುದೇ ಬದಲಾವಣೆಗಳನ್ನು ಕಾಣದಿದ್ದರೆ, ನೀವು ಹೇಳಿದಂತೆ ಅವನು ಕೂಲಿ ಕೆಲಸಕ್ಕೆ ನಿಮ್ಮ ಜೊತೆ ಬರುತ್ತಾನೆ' ಎಂದರು. ಮುಸ್ತಾಫನ ತಂದೆಗೆ ಉಪಾಧ್ಯಾಯರ ಮೇಲಿನ ಗೌರವದಿಂದ ಇಲ್ಲವೆನ್ನಲು ಆಗಲಿಲ್ಲ. ಅವರು ಮುಸ್ತಾಫ ವಿದ್ಯಾಭ್ಯಾಸವನ್ನು ಮುಂದುವರಿಸುವುದಕ್ಕೆ ಷರತ್ತಿನ ಮೇಲೆ ಒಪ್ಪಿದರು. ಮುಸ್ತಾಫನು ಕ್ರಮೇಣ ಚೆನ್ನಾಗಿ ಅಧ್ಯಯನ ಮಾಡಿ ಉತ್ತೀರ್ಣನಾದ.

ಮುಂದೆ ಸ್ನಾತಕ ಪದವಿಗೆಂದು ಬೆಂಗಳೂರಿಗೆ ಆಗಮಿಸಿದ. ಅವನು ಅಂತಿಮ ವರ್ಷದ ಪರೀಕ್ಷೆಗಳಿಗೆ ತಯಾರಾಗುತ್ತಿರಲು, ಒಮ್ಮೆ ಚಹಾ ಸೇವಿಸಲು ಅಂಗಡಿಯ ಬಳಿ ನಿಂತಿದ್ದ. ಇಬ್ಬರು ಮಹಿಳೆಯರು ಪೊಟ್ಟಣದಲ್ಲಿ ಹಿಟ್ಟನ್ನು ಕೊಂಡೊಯ್ಯುತ್ತಿದ್ದರು. ಮುಸ್ತಾಫನು 'ಅದೇನು?' ಎಂದು ಕೇಳಲು 'ಅದು ದೋಸೆ ಹಿಟ್ಟು, ಇಡ್ಲಿ ಹಿಟ್ಟು. ನಾವು ಕೆಲಸಕ್ಕೆ ಹೋಗುವುದರಿಂದ ಮನೆಯಲ್ಲಿ ಅವುಗಳನ್ನು ಮಾಡಲು ಆಗುವುದಿಲ್ಲ. ಆದ್ದರಿಂದ ಇಲ್ಲಿ ದೋಸೆ ಹಿಟ್ಟು ಮತ್ತು ಇಡ್ಲಿ ಹಿಟ್ಟು ಚೆನ್ನಾಗಿರುತ್ತದೆ. ಆದ್ದರಿಂದ ಇಲ್ಲಿಂದ ನಾವು ಕೊಂಡುಕೊಳ್ಳುತ್ತೇವೆ' ಎಂದು ಉತ್ತರಿಸಿದರು.

ಈ ಮಾತುಗಳನ್ನು ಆಲಿಸಿದ ಮುಸ್ತಾಫನಿಗೆ ಬೆಂಗಳೂರು ಮಹಾನಗರದಲ್ಲಿ ಇದೇ ರೀತಿ ಸಾವಿರಾರು ಮಹಿಳೆಯರು ಕೆಲಸಕ್ಕೆ ಹೋಗುತ್ತಾರೆ. ಅವರಿಗೂ ಬಹುಶಃ ಇದೇ ಸಮಸ್ಯೆಯಿರಬಹುದು. ಅದಕ್ಕೆ ಪರಿಹಾರ ರೂಪದಲ್ಲಿ ನಾನು ಉತ್ತಮ ಗುಣಮಟ್ಟದ ದೋಸೆ ಮತ್ತು ಇಡ್ಲಿ ಹಿಟ್ಟನ್ನು ಪೂರೈಸಿದರೆ, ಅದರಿಂದ ಅವರಿಗೂ ಸಹಾಯವಾಗುತ್ತದೆ, ನನಗೂ ಅದು ಜೀವನ ಆಸರೆಯಾಗುತ್ತದೆ ಎಂದು ಆಲೋಚಿಸಿದ. ಪರೀಕ್ಷೆ ಮುಗಿದ ಮೇಲೆ I D Company P. Ltd. ಎಂಬ ಕಂಪನಿಯನ್ನು ಮುಸ್ತಾಫನು ೫೦,೦೦೦ ರೂಗಳ ಸಾಲದಿಂದ ಪ್ರಾರಂಭಿಸಿಯೇ ಬಿಟ್ಟ. ಐ. ಡಿ. ಕಂಪನಿ ಎಂದರೆ ಇಡ್ಲಿ ದೋಸಾ ಕಂಪನಿ ಎಂದು ಅಷ್ಟೇ. ಕೆಲವೇ ವರ್ಷಗಳಲ್ಲಿ ಅದು ಒಳ್ಳೆಯ ಲಾಭವನ್ನು ಕಂಡಿತು.

ಮುಸ್ತಾಫನು ವ್ಯಾಪಾರದ ಜವಾಬ್ದಾರಿಯನ್ನು ತನ್ನ ಸಹೋದರರಿಗೆ ಒಪ್ಪಿಸಿ, ದುಬೈಗೆ ಉನ್ನತ ವ್ಯಾಸಂಗಕ್ಕೆಂದು ತೆರಳಿದ. ಅವನ ವ್ಯಾಸಂಗವನ್ನು ಮುಗಿಸಿ ಅಲ್ಲೇ ಕೆಲವು ವರ್ಷಗಳು ಕೆಲಸ ಮಾಡಿ ಭಾರತಕ್ಕೆ ಹಿಂದಿರುಗಿದ. ಈಗ ಬೆಂಗಳೂರಿನಲ್ಲಿ ಲಕ್ಷಾಂತರ ರೂಗಳ ವ್ಯಾಪಾರ ವಹಿವಾಟನ್ನು ಅವನು ಮಾಡುತ್ತಿದ್ದಾನೆ.

ಹೀಗೆ ಆತ ಸೋಮಾರಿತನ ಎಂಬ ದೌರ್ಬಲ್ಯವನ್ನು ತ್ಯಜಿಸಿ ಚೆನ್ನಾಗಿ ಓದಿ ಮುಂದೆ ಲೌಕಿಕ ಜೀವನದಲ್ಲಿ ಯಶಸ್ವಿ ವ್ಯಕ್ತಿಯಾಗಿದ್ದಾನೆ. ನಮ್ಮ ವಿದ್ಯಾರ್ಥಿಗಳು ಸೋಮಾರಿತನಕ್ಕೆ ಒಳಗಾಗಿ, ಹಾಳಾಗುತ್ತಿರುತ್ತಾರೆ. ಅವರು ತಮ್ಮ ದೌರ್ಬಲ್ಯವನ್ನು ತ್ಯಜಿಸಿ ಎದ್ದು ನಿಂತಲ್ಲಿ ಅವರೂ ಕೂಡ ಉತ್ತಮ ಸಾಧನೆಗಳನ್ನು ಮಾಡಬಹುದು. ಪ್ರತಿಯೊಬ್ಬ ವಿದ್ಯಾರ್ಥಿ-ವಿದ್ಯಾರ್ಥಿನಿಯರಲ್ಲಿ ಅದ್ಭುತವಾದ ಶಕ್ತಿಯಿರುತ್ತದೆ. ಅದನ್ನು ನಾವು ಅಭಿವ್ಯಕ್ತ ಮಾಡಬೇಕು ಅಷ್ಟೇ. ಸತತ ಪರಿಶ್ರಮದಿಂದ, ಉತ್ತಮ ಸಾಧನೆಗಳನ್ನು ಪ್ರತಿಯೊಬ್ಬರೂ ಮಾಡಬಹುದು.

### ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಮಧ್ಯ ಪ್ರದೇಶದ ಇಂಡೋರ್‌ನಲ್ಲಿ ಸುಬೋಧ್ ಕುಮಾರ್ ಸುಲಭ ಶೌಚಾಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರ ಪತ್ನಿ ಮನೆ ಕೆಲಸಗಳನ್ನು ಮಾಡುತ್ತಿದ್ದಾರೆ. ಕಡು ಬಡತನ ಅವರನ್ನು ಬಾಧಿಸುತ್ತಿತ್ತು. ವಾಸಕ್ಕೆಂದು ಈ ಕುಟುಂಬಕ್ಕೆ ಒಂದೂ ಸೂರೂ ಇಲ್ಲ. ಶೌಚಾಲಯದ ಒಂದು ಮೂಲೆಯ ಕೋಣೆಯಲ್ಲಿ ಇವರುಗಳ ವಾಸ. ಯೋಚಿಸಿ ನೋಡಿ. ಸಾರ್ವಜನಿಕ ಶೌಚಾಲಯಕ್ಕೆ ಹೋಗಿ ಬರಲು ಅನೇಕ ಬಾರಿ ನಾವು ಹೇಸಿಗೆ ಪಡುತ್ತೇವೆ. ಮೂಗು ಮುಚ್ಚಿಕೊಂಡು ಅಲ್ಲಿಗೆ ಹೋಗಿ ಬರುತ್ತೇವೆ. ಆದರೆ ಈ ಕುಟುಂಬದ ವಾಸವೇ ಆ ಶೌಚಾಲಯದ ಮೂಲೆಯಲ್ಲಿ. ಇವರ ಮಗಳು ಜೂಹಿ ಜಾ ಪ್ರತಿಭಾವಂತೆ. ನಮ್ಮಲ್ಲಿ ಅನೇಕರು ಭಾವಿಸುವಂತೆ ಬಡತನ ಅವಳಿಗೆ ಅಡ್ಡಿ ಬರಲಿಲ್ಲ. ತನ್ನ ಸತತ ಪರಿಶ್ರಮ ಉತ್ಸಾಹಗಳಿಂದ ೨೦೧೬ರಲ್ಲಿ ಅಂತರ ರಾಷ್ಟ್ರೀಯ ಏಷ್ಯನ್ ಅಥ್ಲೆಟಿಕ್ಸ್‌ನಲ್ಲಿ ಕೊ ಕೊ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ, ಸ್ವರ್ಣ ಪದಕವನ್ನು ಪಡೆದಳು. ೨೦೧೮ರಲ್ಲಿ ಮಧ್ಯ ಪ್ರದೇಶ ಸರ್ಕಾರವು ಕ್ರೀಡಾಪಟುಗಳಿಗೆ ನೀಡುವ ಉನ್ನತ ವಿಕ್ರಮ ಪ್ರಶಸ್ತಿಯನ್ನು ಜೂಹಿಗೆ ನೀಡಿ ಗೌರವಿಸಿತು.

ಜೂಹಿಗೆ ಅವಳ ಬಡತನವಾಗಲಿ, ಇನ್ನು ಯಾವುದೇ ಸಂಗತಿಗಳೂ ಸಾಧನೆಯನ್ನು ಮಾಡಲು ಅಡ್ಡಿ ಬರಲಿಲ್ಲ. ಆದರೆ ನಮ್ಮಲ್ಲಿ ಅನೇಕ ವಿದ್ಯಾರ್ಥಿಗಳು ನಾನು ಬಡವ, ನನ್ನ ತಂದೆ-ತಾಯಿಯರು ಅನಕ್ಷರಸ್ಥರು, ನಾನು ಹಳ್ಳಿಯಲ್ಲಿ ಹುಟ್ಟಿದೆ, ನನಗೆ ಉತ್ತಮ ಗುರುಗಳು ಸಿಗಲಿಲ್ಲ, ನನ್ನ ಮನೆಯ ಸುತ್ತಮುತ್ತಲಿನ ಪರಿಸರ ಚೆನ್ನಾಗಿರಲಿಲ್ಲ, ನನ್ನ ಹಣೆಬರಹ ಸರಿಯಿಲ್ಲ, ಇತ್ಯಾದಿ ಒಂದಲ್ಲ ಒಂದು ಕಾರಣಗಳನ್ನು ಕೊಡುತ್ತಿರುತ್ತಾರೆ.

ನಾನು ಏನನ್ನಾದರೂ ಸಾಧಿಸಬೇಕು! ಜೀವನದಲ್ಲಿ ಮುಂದೆ ಬರಬೇಕು! ನನ್ನಿಂದ ನಮ್ಮ ತಂದೆ-ತಾಯಿಗಳಿಗೆ, ನಮ್ಮ ದೇಶಕ್ಕೆ ಕೀರ್ತಿಯನ್ನು ತರಬೇಕು! ಎಂದು ಆಲೋಚನೆಗಳನ್ನು ಹೊಂದಿ ಪ್ರಯತ್ನ ಮಾಡಿದರೆ ನಾವೂ ಕೂಡ ಉತ್ತಮ ಸಾಧಕರಾಗುವುದರಲ್ಲಿ ಯಾವುದೇ ಸಂದೇಹವಿಲ್ಲ. ಆದ್ದರಿಂದಲೇ ಶ್ರೀಕೃಷ್ಣ ಪರಮಾತ್ಮನು 'ನಮಗೆ ನಾವೇ ನಿಜವಾದ ಶತ್ರು, ನಾವೇ ನಿಜವಾದ ಮಿತ್ರ' ಎಂದು ಹೇಳಿರುವುದು.

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।**
**ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥**

*(ಗೀತೆ ೬.೫)*

'ನಮ್ಮ ಮನಸ್ಸು ನಮ್ಮ ಹತೋಟಿಯಲ್ಲಿದ್ದರೆ, ಅದು ನಮಗೆ ಮಿತ್ರನಾಗುತ್ತದೆ; ನಮ್ಮ ಮನಸ್ಸು ನಮ್ಮ ಹತೋಟಿಯಲ್ಲಿ ಇಲ್ಲದಿದ್ದರೆ, ಅದು ನಮಗೆ ಶತ್ರುವಾಗುತ್ತದೆ.'

ಸ್ವಾಮಿ ವಿವೇಕಾನಂದರು ಈ ಮೇಲಿನ ಮಾತುಗಳನ್ನು 'ನಿನ್ನ ಏಳಿಗೆಗೆ ನೀನೇ ಶಿಲ್ಪಿ' ಎಂದು ಸುಂದರವಾಗಿ ನಮಗೆಲ್ಲ ಮನ ಮುಟ್ಟುವಂತೆ ಹೇಳಿದ್ದಾರೆ.

**ಯೋಗಃ ಕರ್ಮಸು ಕೌಶಲಂ**

ಇಂದಿನ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕೌಶಲ ತರಬೇತಿಗಳಲ್ಲಿ ಗೀತೆಯ ಮೇಲಿನ ಶ್ಲೋಕದ ಭಾಗವನ್ನು ಉದಾಹರಿಸುತ್ತಿರುವುದನ್ನು ಕಾಣಬಹುದು. ಅನೇಕ ಐ.ಟಿ. ಕಂಪನಿಗಳಲ್ಲೂ ಅಲ್ಲಿನ ಕೆಲಸಗಾರರು ಸಮರ್ಪಕವಾಗಿ, ನಿಖರತೆಯಿಂದ ಕೆಲಸ ಮಾಡಬೇಕೆಂದು ಹೇಳುವಲ್ಲಿ ಈ ಶ್ಲೋಕದ ಭಾಗವನ್ನು ಉದ್ಧರಿಸುತ್ತಿರುತ್ತಾರೆ. ಇಲ್ಲಿ ನಾವು ಕಡಿಮೆ ಸಮಯದಲ್ಲಿ ಹೆಚ್ಚು ಸಮರ್ಪಕವಾಗಿ, ನ್ಯೂನ್ಯತೆಗಳಿಲ್ಲದೆ ಕೆಲಸಗಳನ್ನು ನಿರ್ವಹಿಸಬೇಕೆಂದು ಅವರ ಒಟ್ಟಾರೆ ಅಭಿಪ್ರಾಯ. ವಿದ್ಯಾರ್ಥಿಗಳ ಕೆಲಸ ಅಧ್ಯಯನ, ವ್ಯಕ್ತಿತ್ವ ನಿರ್ಮಾಣ. ಈ ಗುರುತರ ಕೆಲಸವನ್ನು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸಮರ್ಪಕವಾಗಿ ಮಾಡಿದಾಗ ಅವರ ಜೀವನವು ಸಫಲತೆಯಿಂದ ಕೂಡಿರುತ್ತದೆ. ಅಲ್ಲದೆ ಅಂತಹ ಯುವಕ-ಯುವತಿಯರಿಂದ ಕೂಡಿದ ದೇಶವು ಸಮೃದ್ಧವಾಗಿ ಬೆಳೆಯುತ್ತದೆ. ಆದರೆ ಇಂದಿನ ಅನೇಕ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ವಿದ್ಯಾರ್ಜನೆ ಕೆಲಸವನ್ನು ಸರಿಯಾಗಿ ಮಾಡದೇ, ಕೇವಲ ಪರೀಕ್ಷಾ ಸಮಯದಲ್ಲಿ ಓದಿ, ಪರೀಕ್ಷೆ ಬರೆದು ಅಂಕಗಳನ್ನು ಗಳಿಸುತ್ತಾರೆ. ಆದರೆ ಅವರ ಜ್ಞಾನದ ಮಟ್ಟವನ್ನು ಗಮನಿಸಿದಾಗ ಅದು ನಿರಾಸೆಯನ್ನು ತರುತ್ತದೆ. ಅಂತಹ ಅನೇಕ ಯುವಕ ಯುವತಿಯರು ಜೀವನದಲ್ಲಿ ಮುಂದೆ ಅನೇಕ ಕಷ್ಟಗಳನ್ನು, ವೈಫಲ್ಯಗಳನ್ನು ಅನುಭವಿಸುತ್ತಾ ಮಾನಸಿಕ ಖಿನ್ನತೆಗೆ ಒಳಗಾಗುತ್ತಾರೆ.

ಇನ್ನು ಕೆಲವು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪ್ರಾಮಾಣಿಕವಾಗಿ ಓದಲು ಪ್ರಯತ್ನವೇನೋ ಮಾಡುತ್ತಾರೆ. ಆದರೆ ಅಲ್ಲಿ ಕೌಶಲ್ಯ ಹಾಗೂ ಅಚ್ಚುಕಟ್ಟಾದ ತಯಾರಿಗಳನ್ನು ಸರಿಯಾಗಿ ಮಾಡದೆ, ಅಸಫಲತೆಯನ್ನು ಅಥವಾ ಅವರು ನಿರೀಕ್ಷಿಸಿದ ಮಟ್ಟದ ಪ್ರತಿಫಲವನ್ನು ಕಾಣಲಾಗುವುದಿಲ್ಲ.

ನಮ್ಮಲ್ಲಿ ಅನೇಕರು 'ನಾವು ಕತ್ತೆಯಂತೆ ದುಡಿದೆವು. ಆದರೆ ಏನು ಪ್ರಯೋಜನ?' ಎಂದೆಲ್ಲಾ ಉದ್ಗಾರ ತೆಗೆಯುತ್ತಿರುತ್ತಾರೆ. ಅವರಲ್ಲಿ ಅನೇಕರು ಕಷ್ಟಪಟ್ಟು ಕೆಲಸಗಳನ್ನೇನೋ ಮಾಡಿರುತ್ತಾರೆ. ಆದರೆ ಅಲ್ಲಿ ಕುಶಲತೆಯ ಅಭಾವವಿರುತ್ತದೆ. ಆದ್ದರಿಂದ ಕರ್ಮವನ್ನು ಕುಶಲತೆಯಿಂದ ಮಾಡಬೇಕು ಎಂಬ ಶ್ರೀಕೃಷ್ಣನ ಮಾತುಗಳನ್ನು ನಾವು ಎಲ್ಲರೂ ಸರಿಯಾಗಿ ಅರ್ಥಮಾಡಿಕೊಂಡು ಜೀವನದಲ್ಲಿ ಅನುಷ್ಠಾನಕ್ಕೆ ತಂದರೆ, ಅದರಿಂದ ನಾವು ಯಶಸ್ಸನ್ನು ಕಾಣಬಹುದು. ಇಂದಿನ ಸ್ಪರ್ಧಾತ್ಮಕ ಯುಗವು ನಮ್ಮೆಲ್ಲರಿಂದ ಇದನ್ನು ಹೆಚ್ಚಾಗಿ ನಿರೀಕ್ಷಿಸುತ್ತಿದೆ.

ದಿಲೀಪ ಎಂಬ ಯುವಕ ಮರ ಕೊಯ್ಯುವ ಕಾರ್ಖಾನೆಗೆ ಸೇರುತ್ತಾನೆ. ಅಲ್ಲಿ ಅವನ ಕೆಲಸ ಮರದ ದಿಮ್ಮಿಗಳನ್ನು ತನ್ನ ಕೊಡಲಿಯಿಂದ ಕತ್ತರಿಸಿ ಸೌದೆ ತಯಾರು ಮಾಡುವುದು. ಆ ಕಾರ್ಖಾನೆಯಲ್ಲಿ ೧೦-೧೫ ಜನರು ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದರು. ಕೆಲವೇ ದಿವಸಗಳಲ್ಲಿ ದಿಲೀಪನು ಅಲ್ಲಿನ ಎಲ್ಲಾ ಕೆಲಸಗಾರರ ಜೊತೆ ಉತ್ತಮ ಸಂಬಂಧವನ್ನು ಬೆಳೆಸಿ, ಎಲ್ಲರ ಪ್ರೀತಿಗೆ ಪಾತ್ರನಾದನು. ಎಲ್ಲರೂ ಮಧ್ಯಾಹ್ನ ಒಟ್ಟಿಗೆ ಕುಳಿತು ಸಂತೋಷದಿಂದ ಊಟ ಹಂಚಿಕೊಂಡು ತಿನ್ನುತ್ತಿದ್ದರು. ಹೀಗೆ ಐದಾರು ತಿಂಗಳು ಕಳೆದವು. ಎಂದಿನಂತೆ ದಿಲೀಪನು ಕಾರ್ಖಾನೆಗೆ ಕೆಲಸಕ್ಕೆಂದು ಬಂದ. ಇತರೆ ಕೆಲಸಗಾರರಿಗೆ ದಿಲೀಪನು ಎಂದಿನಂತೆ ಮುಂಜಾನೆಯ ಶುಭಾಶಯಗಳನ್ನು ಕೋರಿದಾಗ ಅಂದು ಅವನಿಗೆ ಅಚ್ಚರಿ ಕಾದಿತ್ತು. ಯಾರೂ ಕೂಡ ಅವನಿಗೆ ಶುಭಾಶಯಗಳನ್ನು ಪ್ರತಿಯಾಗಿ ಹೇಳಲಿಲ್ಲ. ಬದಲಿಗೆ ಮುಖವನ್ನು ಸಿಂಡರಿಸಿಕೊಂಡು ಹೋದರು. ಅಂದು ಅವನ ಜೊತೆ ಯಾರೂ ಮಾತನಾಡಲಿಲ್ಲ. ಅವನ ಜೊತೆ ಊಟಕ್ಕೂ ಕುಳಿತುಕೊಳ್ಳಲಿಲ್ಲ. ಅವನು ಬಂದರೆ ಸಾಕು, ಇತರರು ಎದ್ದು ಹೋಗುತ್ತಿದ್ದರು. ಈ ಹಠಾತ್ ಬದಲಾವಣೆಗೆ ಕಾರಣವೇನೋ ಎಂದು ದಿಲೀಪನಿಗೆ ಅರ್ಥವಾಗಲಿಲ್ಲ. ಕೊನೆಗೆ ಅಂದು ಸಂಜೆ ಒಬ್ಬ ಕೆಲಸಗಾರನನ್ನು ಹಿಡಿದುಕೊಂಡು, 'ಸಹ-ಕೆಲಸಗಾರರಲ್ಲಿ ಆಗಿರುವ ಈ ಹಠಾತ್ ಬದಲಾವಣೆಗೆ ಕಾರಣವೇನು' ಎಂದು ಅವನನ್ನು ಅಂಗಲಾಚಿ ಬೇಡಿಕೊಂಡನು. ಆಗ ಅವನು 'ನೀನು ಇಲ್ಲಿ ಸೇರಿ ಕೆಲವೇ ತಿಂಗಳಾಗಿವೆ. ಆದರೆ ನಿನಗೆ ಯಜಮಾನರು ಸಂಬಳವನ್ನು ದೊಡ್ಡಮೊತ್ತದಲ್ಲಿ ಹೆಚ್ಚುಮಾಡಿದ್ದಾರೆ. ನಮಗೆಲ್ಲ ಅಷ್ಟನ್ನು ಮಾಡಲು ಅನೇಕ ವರ್ಷಗಳೇ ಆಯಿತು. ನೀನು ಯಜಮಾನರ ಬಳಿ ಪೂಸಿ ಹೊಡೆದಿರಬೇಕು. ಅಲ್ಲದೆ ನಮ್ಮ ಬಗ್ಗೆ ನೀನು ಯಜಮಾನರ ಬಳಿ ಏನೋ ಕಿವಿ ಕಚ್ಚಿರಬೇಕು ಎಂಬುದು ನಮ್ಮೆಲ್ಲರ ಅಭಿಪ್ರಾಯ. ನೀನು ಬಹಳ ಒಳ್ಳೆಯವ ಎಂದು ನಾವೆಲ್ಲರೂ ನಿನ್ನನ್ನು ನಂಬಿದ್ದೆವು. ಆದರೆ ನೀನು ಇಂತಹ ಮೋಸಗಾರ ಎಂದು ನಮಗೆ ತಿಳಿದಿರಲಿಲ್ಲ. ಸಾಕಪ್ಪ ನಿನ್ನ ಸಹವಾಸ' ಎಂದು ಹೊರಟುಹೋದ. ದಿಲೀಪನಿಗೆ ಈಗ ಕಾರಣ ತಿಳಿಯಿತು. ಯಜಮಾನರ ಬಳಿ ನಡೆದ ವಿಷಯವನ್ನೆಲ್ಲಾ ದಿಲೀಪನು ತಿಳಿಸಿದನು.

ಮಾರನೆ ದಿವಸ ಎಲ್ಲಾ ಕೆಲಸಗಾರರನ್ನು ಯಜಮಾನನು ತನ್ನ ಕೋಣೆಗೆ ಬರಲು ತಿಳಿಸಿದನು. ಪ್ರತಿಯೊಬ್ಬ ಕೆಲಸಗಾರರನ್ನು, 'ನೀನು ಪ್ರತಿ ದಿವಸ ಎಷ್ಟು ಒಣ ಮರಗಳನ್ನು ಕಡಿದು ಸೌದೆ ಮಾಡುತ್ತೀಯ?' ಎಂದು ಪ್ರಶ್ನಿಸಿದನು. 'ನಾಲ್ಕು, ಐದು, ಏಳು' ಎಂದೆಲ್ಲಾ ಅಲ್ಲಿನ ಕೆಲಸಗಾರರು ಉತ್ತರಿಸಿದರು. ಯಜಮಾನ ದಿಲೀಪನಿಗೆ, 'ನೀನು ಒಂದು ದಿವಸಕ್ಕೆ ಎಷ್ಟು ಮರಗಳನ್ನು ಕಡಿಯುತ್ತೀಯ?' ಎಂದು ಪ್ರಶ್ನಿಸಿದನು. ದಿಲೀಪನು, 'ಒಂಬತ್ತು




‘ವಿದ್ಯಾರ್ಥಿಗಳಿಗಾಗಿ ಗೀತೆ’ ಇಂಗ್ಲಿಷ್‌ನಲ್ಲಿ

ಅಥವಾ ಹತ್ತು ಮರಗಳನ್ನು’ ಎಂದನು. ಅವನ ಮಾತುಗಳನ್ನು ಕೇಳಿ ಅಲ್ಲಿದ್ದ ಕೆಲಸಗಾರರು ಆಶ್ಚರ್ಯಚಕಿತರಾದರು. ‘ಇದು ಸುಳ್ಳು. ಅಷ್ಟು ಮರಗಳನ್ನು ಒಂದೆರಡು ದಿವಸ ಕಡಿಯ ಬಹುದು. ಆದರೆ ಪ್ರತಿನಿತ್ಯ ಸಾಧ್ಯವಿಲ್ಲ. ನಮಗೆಲ್ಲ ಎಷ್ಟು ವರ್ಷ ಗಳ ಅನುಭವವಿದೆ’ ಎಂದು ಒಕ್ಕೊರಲಿನಿಂದ ಅಲ್ಲಿನ ಕೆಲಸ ಗಾರರು ಕೋಪದಿಂದ ಕೂಗಿದರು. ಯಜಮಾನನು ಮ್ಯಾನೇ ಜರನನ್ನು ಕರೆದು ಕೇಳಲು ‘ದಿಲೀಪನ ಮಾತು ಸತ್ಯವಾಗಿದೆ. ಅವನು ಪ್ರತಿ ನಿತ್ಯ ಅಷ್ಟು ಮರಗಳ ದಿಮ್ಮಿಗಳನ್ನು ಕಡಿದು ಸೌದೆ ಮಾಡುತ್ತಿದ್ದಾನೆ’ ಎಂದನು.

ಇದು ಹೇಗೆ ಸಾಧ್ಯವಾಗುತ್ತಿದೆ ಎಂದು ಪ್ರಶ್ನಿಸಲು, ದಿಲೀ ಪನು, ‘ನೀವು ನಿಮ್ಮ ಕೊಡಲಿಯನ್ನು ಎಷ್ಟು ದಿವಸಗಳಿಗೊಮ್ಮೆ ಶುಚಿಗೊಳಿಸುತ್ತೀರಾ? ಅದನ್ನು ಸಾಣೆ ಕಲ್ಲಿನ ಮೇಲೆ ಉಜ್ಜಿ ಅದನ್ನು ಹರಿತವಾಗಿರುವಂತೆ ಎಷ್ಟು ದಿನಗಳಿಗೊಮ್ಮೆ ಮಾಡು ತ್ತೀರಾ?’ ಎಂದು ಪ್ರಶ್ನಿಸಿದನು. ‘ಐದು, ಆರು, ಎಂಟು, ಹತ್ತು ದಿನಗಳಿಗೊಮ್ಮೆ’ ಎಂದರು ಕೆಲಸಗಾರರು. ದಿಲೀಪನು, ‘ಅಷ್ಟೇ ನೋಡಿ ನನಗೂ ಮತ್ತು ನಿಮಗೂ ಇರುವ ವ್ಯತ್ಯಾಸ. ನಾನು ಪ್ರತಿ ನಿತ್ಯ ಇಲ್ಲಿಂದ ಮನೆಗೆ ಹೋದ ಮೇಲೆ ಕೊಡಲಿಯನ್ನು ತೊಳೆದು, ಎಣ್ಣೆ ಹಚ್ಚಿಡುತ್ತೇನೆ. ಅಲ್ಲದೆ ಮೂರು-ನಾಲ್ಕು ದಿನ ಗಳಿಗೊಮ್ಮೆ, ಅಥವಾ ಅಗತ್ಯಕ್ಕೆ ತಕ್ಕಂತೆ ಸಾಣೆಕಲ್ಲಿನ ಮೇಲೆ ಉಜ್ಜಿ ಕೊಡಲಿಯನ್ನು ಚೂಪು ಮಾಡುತ್ತೇನೆ. ಆದ್ದರಿಂದ ನನ್ನ ಕೊಡಲಿಯು ಸದಾ ಹರಿತವಾಗಿರುತ್ತದೆ. ಆದ್ದರಿಂದ ನಾನು ಅಷ್ಟು ಮರದ ದಿಮ್ಮಿಗಳನ್ನು ಕಡಿದು ಸೌದೆಗಳನ್ನು ಮಾಡಲು ಸಾಧ್ಯವಾಗುತ್ತಿದೆ’ ಎಂದನು. ದಿಲೀಪನ ಮಾತುಗಳನ್ನು ಕೇಳಿದ ತರುವಾಯ, ಕೆಲಸಗಾರರಿಗೆ ತಮ್ಮ ತಪ್ಪಿನ ಅರಿವಾಯಿತು.

ಹೀಗೆ ನಮ್ಮಲ್ಲಿ ಅನೇಕರು ಬಹಳ ಶ್ರಮವಹಿಸಿ ಕೆಲಸಗಳ ನ್ನೇನೋ ಮಾಡುತ್ತಿರುತ್ತಾರೆ. ಆದರೆ ಅಲ್ಲಿ ಕೌಶಲ್ಯಗಳ ಕೊರತೆ ಯಿರುತ್ತದೆ. ಇದನ್ನು ಯೋಗಃ ಕರ್ಮಸು ಕೌಶಲಂ - ಯೋಗ ವೆಂದರೆ ಕರ್ಮದಲ್ಲಿ ಕುಶಲತೆ ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವುದು. ಇದು ಒಂದು ಭಾಗ. ಈ ಅಂಶವನ್ನು ನಮ್ಮಲ್ಲಿ ಅನೇಕರು ಹೇಳುತ್ತಿರುತ್ತಾರೆ. ಆದರೆ ಶ್ರೀಕೃಷ್ಣನ ಈ ಉಪದೇಶ ದಲ್ಲಿ ಇನ್ನೊಂದು ಪ್ರಮುಖವಾದ ಅಂಶ ಅಥವಾ ಭಾಗವಿದೆ. ಅದು ಕರ್ಮಗಳನ್ನು ಮಾಡುತ್ತಾ ನಮ್ಮ ವ್ಯಕ್ತಿತ್ವವು ರೂಪುಗೊಳ್ಳ ಬೇಕು. ಮನಸ್ಸು ಪರಿಪಕ್ವವಾಗಬೇಕು. ಸುಖ- ದುಃಖ, ಲಾಭ- ನಷ್ಟ, ಸೋಲು-ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವಂತಹ ಸಮತ್ವ ಬುದ್ಧಿಯನ್ನು ನಾವು ಬೆಳಸಿಕೊಳ್ಳಬೇಕು. ಬಾಹ್ಯ ಕೌಶಲ ತೆಯ ಜೊತೆ ಜೊತೆಗೆ ಆಂತರಿಕ ಕೌಶಲ್ಯಗಳನ್ನೂ ನಾವು ಬೆಳಸಿ ಕೊಳ್ಳಬೇಕು. ಅದು ಬಹಳ ಮುಖ್ಯ. ಈ ಆಂತರಿಕ ಕೌಶಲ್ಯಗಳ ಬಗ್ಗೆಯೇ ಶ್ರೀಕೃಷ್ಣನ ಪ್ರಮುಖ ಒತ್ತು.

ಈ ಆಂತರಿಕ ಕೌಶಲ್ಯಗಳನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ಇಂದಿನ ಮಾನಸಿಕ ಅಥವಾ ಭಾವನಾತ್ಮಕ ಸಮಸ್ಯೆಗಳಿಂದ ಮುಕ್ತರಾಗುತ್ತೇವೆ. ಮಾನಸಿಕ ಖಿನ್ನತೆ, ಒತ್ತಡ, ನಕಾರಾತ್ಮಕ ಮನೋಭಾವ, ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂಬ ಮನೋಭಾವ, ಹತಾಶೆ, ಮುಂತಾದ ಎಲ್ಲಾ ಸಮಸ್ಯೆಗಳನ್ನು ನಾವು ನೀಗಿಸಿಕೊಳ್ಳಬಹುದು. ನಾವು ಮಾಡುವ ಕರ್ಮಗಳು ಸರಿಯಾಗಿ ಇದ್ದರೆ, ಅದರಿಂದ ನಮ್ಮ ಇಚ್ಛಾ ಶಕ್ತಿಯು ಹೆಚ್ಚುತ್ತದೆ. ಸರಿಯಾಗಿ ಕರ್ಮ ಮಾಡುವುದರಿಂದ ಜೀವನ ಮೌಲ್ಯಗಳು, ವ್ಯಕ್ತಿತ್ವ ನಿರ್ಮಾಣ, ಜೀವನದ ಗುಣ ಮಟ್ಟವೂ ಕೂಡ ಹೆಚ್ಚು ತ್ತದೆ. ಇದಕ್ಕೆ ಎ.ಪಿ.ಜೆ ಅಬ್ದುಲ್ ಕಲಾಂ, ಸರ್ ಎಂ. ವಿಶ್ವೇಶ್ವ ರಯ್ಯ ಮುಂತಾದ ಮಹನೀಯರೇ ನಿದರ್ಶನ.

ಭಗವದ್ಗೀತೆಯು ಒಂದು ಅದ್ಭುತ ಪ್ರಾಯೋಗಿಕ ಕೈಪಿಡಿ. ನಾವೆಲ್ಲರೂ, ಮುಖ್ಯವಾಗಿ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಅದನ್ನು ಅಧ್ಯಯನ ಮಾಡಿ, ಜೀವನದಲ್ಲಿ ಗೀತೆಯ ಕೆಲವು ವಿಚಾರಗಳನ್ನು ಅನುಷ್ಠಾನ ಮಾಡಿಕೊಂಡಲ್ಲಿ ಯಶಸ್ಸನ್ನು ಕಾಣ ಬಹುದು. ಅಂತಹವರು ಉತ್ತಮ ನಾಗರಿಕರೂ ಆಗಬಹುದು. ಆದ್ದರಿಂದಲೇ ಕೆಲವರು ಹೇಳಿರುವುದು, ನ್ಯಾಯಾಲಯದಲ್ಲಿ ಗೀತೆಯ ಮೇಲೆ ಪ್ರಮಾಣ ಮಾಡಿಸಿ ಸತ್ಯವನ್ನು ಹೇಳುವಂತೆ ಮಾಡುವ ಬದಲು, ವ್ಯಕ್ತಿತ್ವ ರೂಪಗೊಳ್ಳುವ ವಿದ್ಯಾರ್ಜನೆಯ ಸಮಯದಲ್ಲಿ ಭಗವದ್ಗೀತೆಯನ್ನು ಹೇಳಿಕೊಟ್ಟರೆ, ನ್ಯಾಯಾ ಲಯಕ್ಕೆ ಹೋಗುವಂತಹ ಸನ್ನಿವೇಶಗಳೇ ಬಾರದಿರಬಹುದು ಎಂದು.